WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜೂನ್ ೧೪, ೨೦೧೨ (ಜ್ಯೇಷ್ಠ ೨೪, ಶಕ ವರ್ಷ ೧೯೩೪)	ಸಂಚಿಕೆ ೨೪

ಭಾಗ–೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ನಗರಸಭಾ ಕಾರ್ಯಾಲಯ, ಹರಿಹರ

ದಿ ಕರ್ನಾಟಕ ಮುನ್ಸಿಪಾಲಿಟೀಸ್ (ಗೈಡೆನ್ಸ್ ಆಫ್ ಆಫೀಸರ್ಸ್ ಗ್ರಾಂಟ್ ಆರ್ಫ ಆಫೀಸ್ ಅಂಡ್ ಮಿಸ್‌ಲೇನಿಯಸ್ ಪ್ರಾವಿಜನ್ಸ್) ರೂಲ್ಸ್ 1966–39ರ ಪ್ರಕಾರ

ಪ್ರಕಟಣೆ

ಸಂಖ್ಯೆ: ನಸಹ:ಕ.ಪ/ಸಿಆರ್:27/2011–12, ದಿನಾಂಕ: 9–2–2012.

ಹರಿಹರ ನಗರಸಭೆಯ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ಹರಿಹರ ನಗರಸಭೆಯಲ್ಲಿ ಕಟ್ಟಡ ಪರವಾನಿಗೆಯ ಫೀಯು ಸುಮಾರು ವರ್ಷಗಳ ಹಿಂದೆ ನಿಗಧಿಯಾಗಿದ್ದು ಇದನ್ನು ಪರಿಷ್ಕರಣೆಗೊಳಿಸದೇ ಇರುವುದರಿಂದ ನಗರಸಭೆಯ ಕೌನ್ಸಿಲ್ ಸಾಮಾನ್ಯ ಸಭೆಯಲ್ಲಿ ವಿಷಯ 64 ದಿನಾಂಕ : 9–9–2011ರ ಮೂಲಕ ಪರವಾನಿಗೆಯ ದರಗಳನ್ನು ಪರೀಕ್ಷರಿಸಿ ನಿಗಧಿಪಡಿಸಿರುತ್ತದೆ ಈ ದರವು ದಿನಾಂಕ : 1–2–2012 ರಿಂದ ಜಾರಿಗೆ ಬಂದಿರುತ್ತದೆ. ಸಾರ್ವಜನಿಕರು ಹೊಸದರಗಳಂತೆ ಪರವಾನಿಗೆ ಫೀ ಪಾವತಿಸಲು ಕೋರಿದೆ.

ಪರಿಷ್ಕರಣೆಗೊಂಡ ದರಗಳ ವಿವರ

ಕ್ರ. ಸಂ.	ವಿವರ	ಪರಿಷ್ಕರಿಸಿದ ದರ
1.	ವಾಸಕ್ಕೆ ಹಾಗೂ ಶೈಕ್ಷಣಿಕ ದೇವಸ್ಥಾನಗಳು, ಉಪಯೋಗಿಸುವ ಕಟ್ಟಡಗಳು	ಪ್ರತಿ ಚದರ ಮೀಟರ್ (ಪ್ರತಿ ಅಂತಸ್ತಿಗೆ ರೂ. 20/–)
2.	ವಾಣಿಜ್ಯ/ಕೈಗಾರಿಕೆ ಕಟ್ಟಡಗಳಿಗೆ	ಪ್ರತಿ ಚದರ ಮೀಟರ್‌ಗೆ (ಪ್ರತಿ ಅಂತಸ್ತಿಗೆ ರೂ. 40/–)
3.	ಕಟ್ಟಡ ಪೂರ್ಣಗೊಂಡ ಬಗ್ಗೆ ದೃಢೀಕರಣ ಪತ್ರ	ವಾಸದ ಕಟ್ಟಡಕ್ಕೆ ರೂ. 500/– ಕೈಗಾರಿಕೆ/ವಾಣಿಜ್ಯ ಕಟ್ಟಡಗಳಿಗೆ ರೂ. 1000/–

ಪೌರಾಯುಕ್ತರು
ನಗರಸಭೆ, ಹರಿಹರ

ಪಿ.ಡಿ. 7

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಪ್ರಿಲಿಮಿನರಿ ಅಧಿಸೂಚನೆ

ಸಂಖ್ಯೆ : ಕೆಎಸ್ಎ ಸಿಆರ್ 18/10–11, ಬೆಂಗಳೂರು, ದಿನಾಂಕ : 11–5–2012.

ಬೆಂಗಳೂರು ಮಹಾನಗರದ ವ್ಯಾಪ್ತಿಯ ಈ ಕೆಳಕಂಡ ಷೆಡ್ಯೂಲ್ ನಲ್ಲಿ ನಮೂದಿಸಿರುವ ಪ್ರದೇಶದಲ್ಲಿ ಇರುವ 14 ಕುಟುಂಬಗಳ ಗುಡಿಸಲುಗಳಲ್ಲಿ 75 ಜನಸಂಖ್ಯೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಚರಂಡಿ ಮೇಲೆ ವಾಸವಾಗಿರುವ ಕೊಳಚೆ ಪ್ರದೇಶ ಅತ್ಯಂತ ಅನಾರೋಗ್ಯ ಮತ್ತು ಮಾಲಿನ್ಯದಿಂದ ಕೂಡಿದ್ದು, ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಬೀದಿ ದೀಪ, ಚರಂಡಿ, ರಸ್ತೆ, ಶೌಚಾಲಯ ಇತ್ಯಾದಿಗಳಿಂದ ವಂಚಿತವಾಗಿದ್ದು ಹಾಗೂ 1993 ರಿಂದಲೂ ಕೊಳಚೆ ಪ್ರದೇಶ ಅಸ್ತಿತ್ವದಲ್ಲಿರುವ ಬಗ್ಗೆ ಮತದಾರರ ಪಟ್ಟಿಯಲ್ಲಿ ಇವರ ಹೆಸರುಗಳಿರುತ್ತವೆ. ಸದರಿ ಪ್ರದೇಶವನ್ನು ಅವರ ಮೂಲ ಸ್ಥಳದಿಂದ ತೆರವುಗೊಳಿಸಿ, ಈ ಪ್ರದೇಶದ 14 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವುದು ಅತ್ಯಾವಶ್ಯವಿರುವುದರಿಂದ, ಈ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 11(1)ರ ಅಡಿಯಲ್ಲಿ ಕೊಳಚೆ ಪ್ರದೇಶವೆಂದು ಘೋಷಿಸುವುದು ಅವಶ್ಯವೆಂದು ಕಂಡುಬಂದಿರುತ್ತದೆ.

ಆದ್ದರಿಂದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ) ಮತ್ತು ನಿರ್ಮೂಲನಾ) ಕಾಯ್ದೆ 1973ರ ಸೆಕ್ಷನ್ 11(1) ರಡಿ ಹಾಗೂ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುವ ಅಧಿಕಾರದಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರು 'ಕೊಳಚೆ ಪ್ರದೇಶ" ವೆಂದು ಘೋಷಿಸಲು ಉದ್ದೇಶಿಸಿರುತ್ತಾರೆ.

ಮೇಲ್ಕಂಡ ಈ ಕ್ರಮದ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಕಾರ್ಯದರ್ಶಿಗಳು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಶೇಷಾದ್ರಿಪುರ, ಬೆಂಗಳೂರು–20 ರವರಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ (15) ಹದಿನೈದು ದಿವಸಗಳ ಕಾಲಾವಕಾಶ ನೀಡಲಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ

ಷೆಡ್ಯೂಲ್

ಬೆಂಗಳೂರು ನಗರದ ರಾಜಾಜಿನಗರದ ಸುಬ್ರಮಣ್ಯನಗರ ಮಿಲ್ಕ್ ಕಾಲೋನಿ ಕೊಳಚೆ ಪ್ರದೇಶದ ಚಕ್ಕುಬಂದಿ ಮತ್ತು ಹದ್ದುಬಸ್ತು ತಃಖ್ತೆ.

ಕ್ರ. ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ವಿಸ್ತೀರ್ಣ ಎ–ಗುಂ	ಚಕ್ಕುಬಂದುಗಳು			
				ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	ಮಿಲ್ಕ್ ಕಾಲೋನಿ ಕೊಳಚೆ ಪ್ರದೇಶ ಸುಬ್ರಮಣ್ಯನಗರ ರಾಜಾಜಿನಗರ ಬೆಂಗಳೂರು ನಗರ	ಬಿಬಿಎಂಪಿ	0–03 ಗುಂಟೆ	ಚಂಗುಟಿ ರಾಮಣ್ಣನ ಪಾರ್ಕ್	ಖಾಲಿ ನಿವೇಶನ ಮತ್ತು ರಸ್ತೆ	ರಸ್ತೆ	ಚರಂಡಿ ಹಾದು ಹೋಗುತ್ತಿರುತ್ತದೆ ಮತ್ತು ಖಾಲಿ ನಿವೇಶನ

ಎಂ.ಕೆ. ಅಯ್ಯಪ್ಪ
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್. 78

ಜಿಲ್ಲಾಧಿಕಾರಿಗಳ ಕಾರ್ಯಾಲಯ, Kolar ಜಿಲ್ಲೆ, Kolar

ಭೂಸ್ವಾಧೀನ ಅಧಿನಿಯಮ 1894 (ತಿದ್ದುಪಡಿ ಅಧಿನಿಯಮ 1984) ಕಲಂ 4(1)ರ ಮೇರೆಗೆ ಅಧಿಸೂಚನೆ

ಕ್ರಮಾಂಕ : LAQ\SR(KO)5/11-12 ದಿನಾಂಕ 24/05/2012

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಕೋಲಾರ ತಾಲ್ಲೂಕು ನ್ಯಾಯಾಂಗ ಇಲಾಖೆಗೆ ಭೂಸ್ವಾಧೀನ ಎಂದು ಕರ್ನಾಟಕ ಸರ್ಕಾರದವರಿಗೆ ಕಂಡು ಬಂದಿರುವುದರಿಂದ.

ಕರ್ನಾಟಕ ಅಧಿನಿಯಮ 1961 ರ 17ರ ಮೂಲಕ ತಿದ್ದುಪಡಿಯಾದ ಭೂಸ್ವಾಧೀನ ಅಧಿನಿಯಮ 1894 (ಕೇಂದ್ರ) ಅಧಿನಿಯಮ ಸಂಖ್ಯೆ 1984ರ 4ನೇ ಪ್ರಕರಣ (1)ನೇ ಉಪಪ್ರಕರಣದ ಉಪಬಂದಗಳ ಅನುಸಾರವಾಗಿ ಅದಕ್ಕೆ ಸಂಬಂದಪಟ್ಟ ಎಲ್ಲರಿಗೂ ಈ ಬಗ್ಗೆ ಈ ಮೂಲಕ ನೋಟೀಸುಗಳನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರದ ಅಧಿನಿಯಮ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಲು ಸಹಾಯಕ ಆಯುಕ್ತರು ಕೋಲಾರ ಇವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಿರುತ್ತೆ.

ಸದರಿ ಅದಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರದ ಅಧಿನಿಯಮದ ಪ್ರಕರಣದ ಮೇರೆಗೆ ಜಿಲ್ಲಾದಿಕಾರಿಯವರ ಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು, ಸಹಾಯಕ ಅಯುಕ್ತರ ಕಛೇರಿ, ಕೋಲಾರ ಉಪ-ವಿಭಾಗ,ಕೋಲಾರ ಇವರನ್ನು ನೇಮಕ ಮಾಡಿರುತ್ತೆ.

ಭೂ ಸ್ವಾಧೀನ ಕಾಯಿದೆಯ ಕಲಂ 17(2) ಮತ್ತು 17(4)ರ ಅಡಿಯಲ್ಲಿ ತುರ್ತು ವಿಧಿ ಬಳಸಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಸರಕಾರ ಅನುಮೋದನೆ ನೀಡಿರುವುದರಿಂದ ಈ ಪ್ರಕರಣದಲ್ಲಿ 5(ಎ) ತನಿಖೆ ಅನ್ವಯಿಸುವುದಿಲ್ಲ.

ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಮೋಜಿಣಿದಾರರ ಅಥವಾ ಬೇರೆ ವ್ಯಕ್ತಿಗಳಿಗೆ ಅಡಚಣೆವುಂಟು ಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಮಾರಾಟ ಗುತ್ತಿಗೆ, ಅಡಮಾನ, ಹಸ್ತಾಂತರಣ, ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚವು ಅಭಿವೃದ್ದಿಗಳನ್ನು ಈ ಅಧಿಸೂಚನೆಯು ಪ್ರಕಟವಾದ ನಂತರ ಜಿಲ್ಲಾಧಿಕಾರಿಗಳು, Kolar ಜಿಲ್ಲೆ ರವರ ಮಂಜೂರಾತಿಯನ್ನು ಪಡೆಯದೇ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣೆಗಾಗಿ ಮಾಡಲಾದ ಅಂತಹ ಭಾಗಗಳಿಗೆ ಪರಿಹಾರ ಧನವನ್ನು ನಿರ್ದರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು.

ಸದರಿ ಜಮೀನಿನ ಒಂದು ಕರಡು ನಕ್ಷೆಯನ್ನು ಸಹಾಯಕ ಆಯುಕ್ತರು, ಸಹಾಯಕ ಅಯುಕ್ತರ ಕಛೇರಿ, ಕೋಲಾರ ಉಪ-ವಿಭಾಗ, ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : Kolar ತಾಲ್ಲೂಕು : Kolar ಹೋಬಳಿ : ಕಸಬಾ ಗ್ರಾಮ : ದೊಡ್ಡ ಹಸಾಳ

Agricultural

ಕ್ರ.ಸ.	ಖಾತೆದಾರರ ಹೆಸರು	ಸಾಗುವಳಿದಾರರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂ ಸ್ವಾಧೀನ ವಿವರ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಮೌಲ್ಯ
1	ಇಂತಿಯಾಜ್ ಅಹಮದ್/		195/*/1	ಖುಷ್ಕಿ	ಜಯಮ್ಮನ ಜಮೀನು	ರೈಲ್ವೇ ರಸ್ತೆ	ಶಂಕರ ಬಿನ್ ಶಂಕರಶೆಟ್ಟಿ ರವರ ಜಮೀನು	ಕೋಲಾರ ಬಂಗಾರಪೇಟೆ ರಸ್ತೆ	1.8.0	2-40
2	ಇಂತಿಯಾಚ್ಅಹ್ಮದ್/ಅಬ್ದುಲ್ರಜಾಕ್			ಖುಷ್ಕಿ	ಜಯಮ್ಮನ ಜಮೀನು	ರೈಲ್ವೇ ರಸ್ತೆ	ಶಂಕರ ಬಿನ್ ಶಂಕರಶೆಟ್ಟಿ ರವರ ಜಮೀನು	ಕೋಲಾರ ಬಂಗಾರಪೇಟೆ ರಸ್ತೆ	2.0.0	4-00
									3.8.0	
3	ಕೆ.ನಿಜಾರ್ಅಹಮ್ಮದ್/ಕೆ.ಅಬ್ದುಲ್ರಜಾಕ್		195/*/2	ಖುಷ್ಕಿ	ಜಯಮ್ಮನ ಜಮೀನು	ರೈಲ್ವೇ ರಸ್ತೆ	ಶಂಕರ ಬಿನ್ ಶಂಕರಶೆಟ್ಟಿ ರವರ ಜಮೀನು	ಕೋಲಾರ ಬಂಗಾರಪೇಟೆ ರಸ್ತೆ	1.8.0	2-40
4	ಕೆ.ನಿಸ್ಸಾರ್ಅಹ್ಮದ್/ಕೆ.ಅಬ್ದುಲ್ರಜಾಕ್			ಖುಷ್ಕಿ	ಜಯಮ್ಮನ ಜಮೀನು	ರೈಲ್ವೇ ರಸ್ತೆ	ಶಂಕರ ಬಿನ್ ಶಂಕರಶೆಟ್ಟಿ ರವರ ಜಮೀನು	ಕೋಲಾರ ಬಂಗಾರಪೇಟೆ ರಸ್ತೆ	0.8.0	0-40
									1.16.0	

ಕ್ರ.ಸ.	ಖಾತೆದಾರರ ಹೆಸರು	ಸಾಗುವಳಿದಾರರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂ ಸ್ವಾಧೀನ ವಿವರ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಮೌಲ್ಯ
5	ಸರಸ್ವತಮ್ಮ/		195/*/3	ಖುಷ್ಕಿ	ಜಯಮ್ಮನ ಜಮೀನು	ರೈಲ್ವೇ ರಸ್ತೆ	ಶಂಕರ್ ಬಿನ್ ಶಂಕರಶೆಟ್ಟಿ ರವರ ಜಮೀನು	ಕೋಲಾರ ಬಂಗಾರಪೇಟೆ ರಸ್ತೆ	1.0.0	1-68

1.0.0

Village Extents: 5.24.0

Agricultural Total Extents: 5.24.0

DESIGNATION : ಸಹಾಯಕ ಆಯುಕ್ತರು

LAOCIRCLE : ಸಹಾಯಕ ಆಯುಕ್ತರ ಕಛೇರಿ, ಕೋಲಾರ ಉಪ-ವಿಭಾಗ

LAOLOCATION : ಕೋಲಾರ

ಜಿಲ್ಲಾಧಿಕಾರಿಗಳು

Kolar ಜಿಲ್ಲೆ.

PR 76

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯಿದೆಯ ಕಲಂ–6(1)ನೇ ಪ್ರಕರಣದ ಮೇರೆಗೆ ಘೋಷಣೆ

ಕ್ರಮಾಂಕ: ಕಂಇ.152:ಭೂಸ್ವಾಚ:2011, ದಿನಾಂಕ: 29–3–2012

ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನು ಸಾರ್ವಜನಿಕ ರಸ್ತೆಯ ಉದ್ದೇಶಕ್ಕೆ ಅಗತ್ಯವಾಗಿದೆಯೆಂದು ದಾವಣಗೆರೆ ಜಿಲ್ಲೆ ಜಿಲ್ಲಾಧಿಕಾರಿಗಳವರ ಪತ್ರದ ಸಂ: ಎಲ್ಎಕ್ಯೂಸಿಆರ್ 103/09–10, ದಿನಾಂಕ: 4.3.2011+ ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿದ್ದುದರಿಂದ

ಮತ್ತು ಕರ್ನಾಟಕ ಕಾಯ್ದೆ:33–1991ರನ್ವಯ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894 (ಕೇಂದ್ರ ಅಧಿನಿಯಮ ಸಂಖ್ಯೆ 1894ರ 1) 5–ಎ ಪ್ರಕರಣದ (2)ನೇ ಉಪ ಪ್ರಕರಣದ ಮತ್ತು 6(1–ಎ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರು ನೀಡಿರುವ ವರದಿಯನ್ನು ಪರಿಶೀಲಿಸಿದ ನಂತರ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಸದರಿ ಭೂಮಿಗಳನ್ನು ಅರ್ಜನೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವು ದರಿಂದ:

ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಭೂಮಿಗಳು ಅಗತ್ಯವಾಗಿದೆ ಎಂದು ಸದರಿ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಉಪವಿಭಾಗಾಧಿಕಾರಿಗಳು, ದಾವಣಗೆರೆ ಉಪವಿಭಾಗ, ದಾವಣಗೆರೆ ಹಾಗೂ ಭೂ ಸ್ವಾಧೀನಾಧಿಕಾರಿಗಳು, ದಾವಣಗೆರೆ ಇವರನ್ನು ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಸದರಿ ಭೂ ಅರ್ಜನೆ ಅಧಿನಿಯಮದ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ. ಹಾಗೂ ಸದರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಸದರಿ ಜಮೀನಿನ ನಕ್ಷೆಯನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಜಿಲ್ಲೆ: ದಾವಣಗೆರೆ ತಾಲ್ಲೂಕು: ಹರಿಹರ ಹೋಬಳಿ: ಮಲೇಬೆನ್ನೂರು ಗ್ರಾಮ: ಮೂಗಿನಗೊಂದಿ

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಬೇಕಾಗುವ ಜಮೀನಿನ ಅಂದಾಜು	
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಎ–ಗುಂ	ಆಕಾರ ರೂ.ಪೈ
1	2	3	4	5	6	7	8	9	10	11
1	ಹಾಲಪ್ಪ ಬಿನ್ ಬಸಪ್ಪ ಯರೇಹಳ್ಳಿ	ಹಾಲಪ್ಪ ಬಿನ್ ಬಸಪ್ಪ ಯರೇಹಳ್ಳಿ	26/1	ಖುಷ್ಕಿ	38	ಊರು	22,23,24,25	30	0–23	0.20
2	ಹಾಲಪ್ಪ ಬಿನ್ ಬಸಪ್ಪ ಯರೇಹಳ್ಳಿ	ಹಾಲಪ್ಪ ಬಿನ್ ಬಸಪ್ಪ ಯರೇಹಳ್ಳಿ	38	ಖುಷ್ಕಿ	30	31	26/1	ಗಡಿ	0–07	0.06
	ಒಟ್ಟು ವಿಸ್ತೀರ್ಣ								0–30	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ. ಮುಳಕೂರ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಸ್ವಾಧೀನ 1:3)

ಪಿ.ಆರ್. 77

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಪ್ರಿಲಿಮಿನರಿ ಅಧಿಸೂಚನೆ

ಸಂಖ್ಯೆ: ಕೆಎಸ್‌ಎ ಸಿಆರ್ 79/2011–12, ದಿನಾಂಕ 04–06–2012

ಈ ಕೆಳಕಂಡ ಷೆಡ್ಯೂಲ್ ನಲ್ಲಿ ನಮೂದಿಸಿರುವ ಪ್ರದೇಶದಲ್ಲಿ ಇರುವ ಮನೆಗಳು ಒತ್ತೊತ್ತಾಗಿದ್ದು ಜನರು ಸಾಮಾನ್ಯ ಸ್ಥಿತಿಯಲ್ಲಿ ವಾಸಿಸಲು ಅನಾನುಕೂಲ ಉಂಟಾಗಿದ್ದು, ಹಾಲಿ ಇರುವ ಗುಡಿಸಲುಗಳ ದುರಸ್ಥಿ ಇಲ್ಲದೇ ಕುಡಿಯುವ ನೀರು, ಬೀದಿ ದೀಪ, ಚರಂಡಿ, ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದ ಕಾರಣ ಅನಾರೋಗ್ಯಕರ ವಾತಾವರಣ ಉಂಟಾಗಿರುವುದನ್ನು ಅಧಿಕಾರಿಗಳು ವರದಿ ಮಾಡಿರುತ್ತಾರೆ. ಈ ಪ್ರದೇಶವು ಜನಸಂದಣಿಯಿಂದ ಕೂಡಿದ್ದು, ಮಾಲಿನ್ಯ ಮತ್ತು ಅನಾರೋಗ್ಯಕರ ವಾತಾವರಣದಿಂದ ಕೂಡಿರುವುದರಿಂದ ಈ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3ರ ಅಡಿಯಲ್ಲಿ ಕೊಳಚೆ ಪ್ರದೇಶವೆಂದು ಘೋಷಿಸುವುದು ಅವಶ್ಯವೆಂದು ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಕಾಯ್ದೆ 1973ರ ಸೆಕ್ಷನ್ 3ರಡಿ ಹಾಗೂ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುವ ಅಧಿಕಾರದಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರು "ಕೊಳ'ಚೆ ಪ್ರದೇಶ" ವೆಂದು ಪ್ರಾಥಮಿಕವಾಗಿ ಘೋಷಿಸಲು ಉದ್ದೇಶಿಸಿರುತ್ತಾರೆ.

ಮೇಲ್ಕಂಡ ಈ ಕ್ರಮದ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಶೇಷಾದ್ರಿಪುರ, ಬೆಂಗಳೂರು–20 ರವರಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ (15) ಹದಿನೈದು ದಿವಸಗಳ ಕಾಲಾವಕಾಶ ನೀಡಲಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಬೆಂಗಳೂರು ನಗರದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶ್ರೀಗಂಧದ ಕಾವಲು ಗ್ರಾಮದ ನೀಲಗಿರಿತೋಪು (ವಿಘ್ನೇಶ್ವರ ನಗರ) ಕೊಳಚೆ ಪ್ರದೇಶದ ಚಕ್ಕುಬಂದಿ ಮತ್ತು ಹದ್ದುಬಸ್ತು ತಃಖ್ತೆ.

ಕ್ರ ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಚಕ್ಕುಬಂದುಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	ನೀಲಗಿರಿತೋಪು (ವಿಘ್ನೇಶ್ವರ ನಗರ) ಕೊಳಚೆ ಪ್ರದೇಶ ಶ್ರೀಗಂಧದ ಕಾವಲು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು	1. ನಾಗಮ್ಮ ಕೋಂ ಮುನಿದಾಸಪ್ಪ 2. ಬಿ.ಎ. ಮುನಿಕೃಷ್ಣ ಬಿನ್ ಲೇಟ್ ಅರಸಪ್ಪ	3	0–17	ಇದೇ ಸರ್ವೆ ನಂ. ಉಳಿಕೆ ಖಾಲಿ ಜಾಗ	ಸ.ನಂ. 2ರ ಖಾಲಿ ಜಾಗ ಮತ್ತು ಪಬ್ಲಿಕ್ ಸ್ಕೂಲ್	ಸ.ನಂ. 2ರ ಖಾಲಿ ಜಾಗ	ಇದೇ ಸ.ನಂ. ಉಳಿಕೆ ಖಾಲಿ ಜಾಗ

ಎಂ.ಕೆ. ಅಯ್ಯಪ್ಪ,
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್. 79